**ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.**

**ಸಿ. ಸಿ. ನಂಬರಃ 424/2024**

**ಫಿರ್ಯಾದುದಾರರು:**

ಧರ್ಮಣ್ಣ ತಂದೆ ಶಿವಪ್ಪ ಸಣ್ಣಳ್ಳಿಮನೆ,
ಪ್ರಾಯ: 48 ವರ್ಷ, ವೃತ್ತಿ: ರೈತಾಬಿ,
ಸಾ: ಸುಳ್ಳಳ್ಳಿ, ಪೋ: ಅಂದಲಗಿ,
ತಾ: ಮುಂಡಗೋಡ, ಉ.ಕ.ಜಿಲ್ಲೆ.

**– ವಿರುದ್ಧ –**

**ಆರೋಪಿತ :**

ತುಕಾರಾಮ ತಂದೆ ಮಂಜುನಾಥ ಹರಿಜನ,
ಪ್ರಾಯ: 35 ವರ್ಷ, ವೃತ್ತಿ: ವಿದ್ಯುತ್ ಗುತ್ತಿಗೆದಾರ,
ಸಾ: ಕೊಳಗಿ, ಪೋ: ಮಳಗಿ,
ತಾ: ಮುಂಡಗೋಡ, ಉ.ಕ.ಜಿಲ್ಲೆ.

**ಆಪಾದನೆ**

ಆರೋಪಿತರಾದ ನೀವು ಪಿರ್ಯಾದುದಾರರಿಗೆ ನೀವು ಸರ್ಕಾರದಿಂದ ಪರವಾನಿಗೆ ಹೊಂದಿದ್ದ ವಿದ್ಯುತ್ ಗುತ್ತಿಗೆದಾರ ಎಂದು ಪರಿಚಯ ಮಾಡಿಕೊಂಡು, ಅವರ ಜಮೀನಿನಲ್ಲಿ ಇದ್ದ ವಿದ್ಯುತ್ ಕಂಬಗಳು ಮತ್ತು ತಂತಿಗಳನ್ನು ಬದಲಿ ಮಾರ್ಗದಲ್ಲಿ ಬದಲಾಯಿಸಿಕೋಡುತ್ತೇನೆ ಎಂದು ಹೇಳಿ ಜನವರಿ 2023 ರಲ್ಲಿ ಅವರಿಂದ ರೂ.1,25,000/–ಗಳನ್ನು ತೆಗೆದುಕೊಂಡಿದ್ದು, ಆದರೆ ನೀವು ಮಾತಿನಂತೆ ನಡೆದು ಕೊಳ್ಳದೆ ಇಂದು ನಾಳೆ ಅಂತಾ ವಿಳಂಬ ಮಾಡುತ್ತಾ ಬಂದಿರುತ್ತಿರಿ. ತದನಂತರ ಫಿರ್ಯಾದಿದಾರ ನೀವು ಮಾಡಿದ ಮೋಸದ ಕುರಿತು ದೂರು ಕೊಡಲು ಮುಂದಾದಾಗ, ನೀವು ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ, ಮಳಗಿ ಮುಂಡಗೊಡ ಶಾಖೆ ಚೆಕ್ಕ ನಂಬರ್ 812775 ದಿನಾಂಕ 25/02/2024 ಎಂದು ನಮೂದಿಸಿದ ಒಟ್ಟು ರೂ.1,25,000/–ಗಳ ಮೊತ್ತಕ್ಕೆ ಚೆಕನ್ನು ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿದಾರರ ಸದ್ರಿ ಚೆಕ್ಕನ್ನು ಅದೇ ದಿನಾಂಕದಂದು ಫಿರ್ಯಾದಿ ಖಾತೆ ಹೊಂದಿರು ಸ್ಟೇಟ್ ಬ್ಯಾಂಕ ಆಫ್

ಇಂಡಿಯಾ, ಮುಂಡಗೊಡ ಶಾಖೆಗೆ ನಗಧೀಕರಣಕ್ಕಾಗಿ ಹಾಜರ ಪಡಿಸಿದಾಗ, ನೀವು ಹೊಂದಿರುವ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ "Funds Insufficient" ಎಂದು ನಮೂದು ಮಾಡಿ ಬ್ಯಾಂಕಿನ ಮೇಮೋದೊಂದಿಗೆ ದಿನಾಂಕ 13/10/2024 ರಂದು ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 03/06/2024 ರಂದು ತಮ್ಮ ವಕೀಲರ ಮೂಲಕ ನೋಟಿಸ್‌ನ್ನು ನಿಮಗೆ ನೀಡಿದ್ದರೂ ಸಹ ನೀವು ಆ ನೋಟಿಸನ್ನು ಸ್ವೀಕರಿಸದೆ, ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೆಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ –

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ 26-09-2025

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳು,
ಮುಂಡಗೋಡ.